**ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ**

**ಓ ಎಸ್ ನಂಃ162/2023**

**ಪಿ ಡಬ್ಲ್ಯೂಃ1**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತುಃ ದಿಃ 06.08.2025**

**ಪಾಟೀ ಸವಾಲುಃ ಶ್ರೀ ಎಮ್ ಎಮ್ ಜಿ ವಕೀಲರಿಂದ ಪ್ರತಿವಾದಿ ಪರ ವಕೀಲರುಃ**

1. ದಾವಾ ಆಸ್ತಿ ಮೂಲತಃ ಕುಲಕರ್ಣಿ ಇವರಿಗೆ ಸಂಬಂದಪಟ್ಟಿದ್ದು. ದಾವಾ ಆಸ್ತಿಯ ಮೂಲ ಸ.ನಂಃ46/3 ಬ ಕ್ಷೇತ್ರ 4 ಎಕರೆ 26 ಗುಂಟೆ. ಸದರಿ ಜಮೀನನ್ನು ಕುಲಕರ್ಣಿ ಮನೆತನದವರು ದಿಃ31.05.1965 ರಂದು ನನ್ನ ತಂದೆಯ ತಾಯಿ ಹೆಸರಿಗೆ ಖರೀದಿ ಕೊಟ್ಟಿರುತ್ತಾರೆ. ನನ್ನ ದಾವೆಯಲ್ಲಿ ನಾನು ದಾವಾ ಆಸ್ತಿ ನನ್ನ ತಂದೆಯ ತಾಯಿ ಅಂದರೆ ಅಜ್ಜಿ ಖರೀದಿ ಹಿಡಿದಿದ್ದು ಅಂತ ಬರೆಸಿದ್ದೇನೆ.

2. ನನ್ನ ಅಜ್ಜಿಗೆ ನನ್ನ ತಂದೆ ಸೇರಿ ಇಬ್ಬರು ಮಕ್ಕಳು, ಅವರು ವೆಂಕನಗೌಡ ಟೋಪನಗೌಡ ಹುಡೇದ ಮತ್ತು ಶಂಕರಗೌಡ ಟೋಪನಗೌಡ ಹುಡೇದ. ಇವರಿಬ್ಬರ ನಡುವೆ ಈ ಹಿಂದೆ 2013 ರಲ್ಲಿ ವಿಭಾಗ ಆಗಿದೆ. ಆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಮ್ಮ ತಂದೆ ತಾಯಿಗೆ ನಾನು ಒಬ್ಬನೆ ಗಂಡು ಮಗ ಮತ್ತು ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ. 2013 ರಲ್ಲಿ ಕೋರ್ಟ ಮೂಲಕ ಮಾಡಿಕೊಂಡ ರಾಜಿ ಡಿಕ್ರಿಗೆ ಹೆಣ್ಣು ಮಕ್ಕಳ ಪಕ್ಷಗಾರರು ಆಗಿರುವುದಿಲ್ಲ. ನನ್ನ ಅಕ್ಕನ ಹೆಸರು ನೀಲವ್ವ ಹಾಗೂ ತಂಗಿಯ ಹೆಸರು ವಸಂತಿ. ಈ ದಾವಾ ಆಸ್ತಿಗೆ ನೀಲವ್ವ ಮತ್ತು ವಸಂತಿ ಸಹ ಮಾಲೀಕರಾಗಿರುತ್ತಾರೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮುಂದಿನ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ನೀಡಲಾಯಿತು.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

Sd/-

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ.**